## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.899/2018

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಶಿವಕುಮಾರ | CW: 1 | PW: 1 |
| ತಂದೆಯ ಹೆಸರು | : | ಬಸಪ್ಪ | | |
| ವಯಸ್ಸು | : | 42 | | |
| ವೃತ್ತಿ | : | ಕೂಲಿ | | |
| ವಾಸಸ್ಥಳ | : | ಬಸವನಹಳ್ಳಿ | | |

ದಿನಾಂಕಃ 10.06.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

1 ಮತ್ತು 2 ನೇ ಆರೋಪಿತರು ನನ್ನ ತಮ್ಮಂದಿರು. 3 ಮತ್ತು 4 ನೇ ಆರೋಪಿತರು ನನ್ನ ತಂದೆ ಮತ್ತು ತಾಯಿ. ಚಾಸಾ 2, 3, 6 ಮತ್ತು 7 ರವರು ಗೊತ್ತು. ಚಾಸಾ 4 ಮತ್ತು 5 ರವರು ನನ್ನ ತಮ್ಮಂದಿರು.

2018 ರಲ್ಲಿ ಸುಮಾರು 10 ಗಂಟೆ ಸಮಯದಲ್ಲಿ ನಾವು ಬಿತ್ತಿ ಬೆಳೆದ ಹೊಲವನ್ನು ಆರೋಪಿಗಳು ನಾಶ ಮಾಡಲು ಹೋಗುತ್ತಿದ್ದರು. ಜನ ಹೇಳಿದ್ದರಿಂದ ನಾವು ಬಿತ್ತನೆ ಮಾಡಿರುತ್ತೇವೆ ಅದನ್ನೇಕೆ ನಾಶ ಮಾಡುತ್ತಿರಾ ಎಂದು ನಾನು, ಚಾಸಾ 4 ಮತ್ತು 5 ರವರು ಆರೋಪಿಗಳ ಮನೆಯ ಹತ್ತಿರ ಹೋಗಿ ಅವರನ್ನು ಕೇಳಿದಾಗ ನಿಮಗೆ ಯಾವುದೇ ಜಮೀನು ಇಲ್ಲ ಜಮೀನು ಬೇಕು ಎಂದು ಬಂದರೆ ಪರಿಣಾಮ ಚೆನ್ನಾಗಿರುವುದಿಲ್ಲ ಎಂದು 3 ಮತ್ತು 4 ನೇ ಆರೋಪಿತರು ನನಗೆ ಹೇಳುತ್ತಿದ್ದಾಗ 1 ನೇ ಆರೋಪಿಯು ಮನೆಯ ಒಳಗಿನಿಂದ ಒಂದು ಕಬ್ಬಿಣದ ಪೈಪ್ ತೆಗೆದುಕೊಂಡು ಬಂದು ನನ್ನ ತಲೆಗೆ ಹೊಡೆದ. ನನ್ನನ್ನು ಬಿಡಿಸಲು ಬಂದ ಚಾಸಾ 4 ರಿಂದ 5 ರವರಿಗೂ ಸಹ ಹೊಡೆದಿರುತ್ತಾರೆ. ಚಾಸಾ 6 ಮತ್ತು 7 ರವರು ನನ್ನನ್ನು ನ್ಯಾಮತಿ ಆಸ್ಪತ್ರೆಗೆ ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿರುತ್ತಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದು ನಂತರ ಗಲಾಟೆಯ ಬಗ್ಗೆ ದೂರು ನೀಡಿರುತ್ತೇನೆ. ದೂರು ಕೊಟ್ಟ ಮಾರನೇ ದಿನ ಪೋಲೀಸರು ಪಂಚನಾಮೆಗೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ನನ್ನ, ಚಾಸಾ 2 ಮತ್ತು 3 ರವರ ಸಮಕ್ಷಮ ಪೋಲೀಸರು ಮಹಜರ್ ಮಾಡಿ 3 ನೇ ಆರೋಪಿಯ ಮನೆಯ ಹತ್ತಿರ ಇದ್ದಂತಹ ಪೈಪ್ ನ್ನು ನಾನು ಪೋಲೀಸರಿಗೆ ನೀಡಿದ್ದರ ಮೇರೆಗೆ ಪೋಲೀಸರು ಅದನ್ನು ತೆಗೆದುಕೊಂಡು ಮಹಜರ್ ಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ಈ ಸಂಬಂಧ ಪೋಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕಬ್ಬಿಣದ ಪೈಪ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

ಸಾಕ್ಷಿಯು ದೂರು ಮತ್ತು ಸ್ಥಳ ಪಂಚನಾಮೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು, ಸಾಕಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಗಲಾಟೆ ನಡೆದ ದಿನಾಂಕ 23.06.2018 ರಾತ್ರಿ 10 ಗಂಟೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಕೈಕಾಲುಗಳಿಂದ ನನ್ನ ಕುತ್ತಿಗೆ ಮತ್ತು ಮೈಕೈಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 1 ರಿಂದ 3 ನೇ ಆರೋಪಿಗಳು ಜಗಳ ಬಿಡಿಸಲು ಬಂದ ಚಾಸಾ 4 ರವರ ಎಡಭುಜಕ್ಕೆ ಹಾಗೂ ಚಾಸಾ 5 ರವರ ಕುತ್ತಿಗೆಗೆ ಮತ್ತು ಎದೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ 6 ಮತ್ತು 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿಗಳು ನನಗೂ, ಚಾಸಾ 4 ರಿಂದ 5 ರವರಿಗೆ ಜಮೀನಿನ ವಿಚಾರಕ್ಕೆ ಬಂದರೆ ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ 4 ಮತ್ತ 5 ರವರು ನ್ಯಾಮತಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ 4 ರವರು ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಮಹಜರ್ ಸಮಯ ಪೋಲೀಸರು ಪೋಟೋ ತೆಗೆದು, ಕಚ್ಚಾ ನಕಾಶೆ ತಯಾರಿಸಿ, ನನ್ನ ಮತ್ತು ಸಾಕ್ಷಿದಾರರ ಸಹಿ

ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.15 ರ ಸಮಯದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ಕಚ್ಚಾ ನಕಾಶೆಯಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಕಚ್ಚಾ ನಕಾಶೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 1 ಪೋಟೋದಲ್ಲಿ ತನ್ನನ್ನು ನೋಡಿ ಗುರುತಿಸಿಕೊಂಡಿದ್ದು ಪೋಟೋವನ್ನು ನಿಪಿ 4 ಎಂದು, ಸಿಡಿಯನ್ನು ನಿಪಿ 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ– ಆರೋಪಿ ಪರ ಶ್ರೀ.ಎಸ್ ಹೆಚ್  ವಕೀಲರಿಂದಃ–</u>

ಆರೋಪಿಗಳು ನನ್ನ ತಂದೆ ತಾಯಿ ಹಾಗೂ ನನ್ನ ಸಹೋದರರು ಎಂದರೆ ಸರಿ. ಜಮೀನಿನಲ್ಲಿ ಬಿತ್ತನೆ ಮಾಡಿದ್ದೇವೆ ಎಂದು ಹೇಳಿದ್ದು ನಿಪಿ 1 ದೂರಿನಲ್ಲಿ ಸದರಿ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ಸದರಿ ಜಮೀನು ಯಾರ ಹೆಸರಿಗೆ ಇದೆ ಎಂತಲೂ ದೂರಿನಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯವರ ಹೆಸರಿಗೆ ಇದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನಮ್ಮ ಮಧ್ಯೆ ವಿಭಾಗ ಆಗಿ ಸದರಿ ಜಮೀನು ನನ್ನ ಭಾಗಕ್ಕೆ ಬಂದಿದೆ ಎಂದು ದೂರಿನಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ. ನಮ್ಮ ಎಲ್ಲಾ ಜಮೀನುಗಳು ಈಗಲೂ ಸಹ ನನ್ನ ತಂದೆ 3 ನೇ ಆರೋಪಿಯ ಹೆಸರಿಗೆ ಇದೆ ಎಂದರೆ ಸರಿ. ಜಮೀನಿನ ವಿಚಾರವಾಗಿ ಹಾಗೂ ಸಾಲಗಳ ವಿಚಾರವಾಗಿ ನಮ್ಮ ಮತ್ತು ಆರೋಪಿಗಳ ಮಧ್ಯೆ ಪ್ರತಿವರ್ಷವು ವ್ಯಾಜ್ಯ ನಡೆಯುತ್ತಿರುತ್ತದೆ ಎಂದರೆ ಸರಿ. ಜಮೀನಿನ ಬಗ್ಗೆ ಮನಸ್ತಾಪದಿಂದ ಆರೋಪಿಗಳ ಮೇಲೆ ನಾನು ಪ್ರತಿವರ್ಷವು ದೂರು ಕೊಡುತ್ತಾ ಬಂದಿದ್ದೇನೆ ಎಂದರೆ ಸರಿ.

2018 ರಲ್ಲಿ ಸುಮಾರು 10 ಗಂಟೆ ಸಮಯದಲ್ಲಿ ನಾವು ಬಿತ್ತಿ ಬೆಳೆದ ಹೊಲವನ್ನು ಆರೋಪಿಗಳು ನಾಶ ಮಾಡಲು ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಜನ ಹೇಳಿದ್ದರಿಂದ ನಾವು ಬಿತ್ತನೆ ಮಾಡಿರುತ್ತೇವೆ ಅದನ್ನೇಕೆ ನಾಶ ಮಾಡುತ್ತಿರಾ ಎಂದು ನಾನು, ಚಾಸಾ 4 ಮತ್ತು 5 ರವರು ಆರೋಪಿಗಳ ಮನೆಯ ಹತ್ತಿರ ಹೋಗಿ ಅವರನ್ನು ಕೇಳಿದಾಗ ನಿಮಗೆ ಯಾವುದೇ ಜಮೀನು ಇಲ್ಲ ಜಮೀನು ಬೇಕು ಎಂದು ಬಂದರೆ ಪರಿಣಾಮ ಚೆನ್ನಾಗಿರುವುದಿಲ್ಲ ಎಂದು 3 ಮತ್ತು 4 ನೇ ಆರೋಪಿತರು ನನಗೆ ಹೇಳುತ್ತಿದ್ದಾಗ 1 ನೇ ಆರೋಪಿಯು ಮನೆಯ ಒಳಗಿನಿಂದ ಒಂದು ಕಬ್ಬಿಣದ ಪೈಪ್ ತೆಗೆದುಕೊಂಡು ಬಂದು ನನ್ನ ತಲೆಗೆ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನನ್ನು ಬಿಡಿಸಲು ಬಂದ

ಚಾಸಾ 4 ರಿಂದ 5 ರವರಿಗೂ ಸಹ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ 6 ಮತ್ತು 7 ರವರು ನನ್ನನ್ನು ನ್ಯಾಮತಿ ಆಸ್ಪತ್ರೆಗೆ ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದು ನಂತರ ಗಲಾಟೆಯ ಬಗ್ಗೆ ದೂರು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದೂರು ಕೊಟ್ಟ ಮಾರನೇ ದಿನ ಪೋಲೀಸರು ಪಂಚನಾಮೆಗೆ ಘಟನಾ ಸ್ಥಳಕ್ಕೆ ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ, ಚಾಸಾ 2 ಮತ್ತು 3 ರವರ ಸಮಕ್ಷಮ ಪೋಲೀಸರು ಮಹಜರ್ ಮಾಡಿ 3 ನೇ ಆರೋಪಿಯ ಮನೆಯ ಹತ್ತಿರ ಇದ್ದಂತಹ ಪೈಪ್ ನ್ನು ನಾನು ಪೋಲೀಸರಿಗೆ ನೀಡಿದ್ದರ ಮೇರೆಗೆ ಪೋಲೀಸರು ಅದನ್ನು ತೆಗೆದುಕೊಂಡು ಮಹಜರ್ ಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಆಟೋ ಓಡಿಸುತ್ತೇನೆ ಎಂದರೆ ಸರಿ. ಆಟೋ ಓಡಿಸುವಾಗ ಬಿದ್ದು ಮಾಡಿಕೊಂಡ ಗಾಯಗಳಿಗೆ ಸುಳ್ಳು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ ಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.